ಈಗಾಗಲೇ ಈ ಯೋಜನೆಗಾಗಿ ಸುಮಾರು ೩ ಕೋಟಿ ರೂಪಾಯಿಗಳು ರಾಜ್ಯ ಸರ್ಕಾರದಿಂದ ವಿನಿಯೋಗವಾಗಿದೆ. ಹಣಕಾಸಿನ ೧೯೯೦-೯೧ನೇ ಸಾಲಿನ ಮುಂಗಡ ಪತ್ರದಲ್ಲಿ ಈ ಯೋಜನೆಗೆ ಯಾವುದೇ ಹಣಕಾಸು ಒದಗಿಸದಿರುವುದು ದುರದೃಷ್ಟಕರ. ಸರ್ಕಾರದ ಈ ತೀರ್ಮಾನದಿಂದ ಹಿಂದುಳಿದ ನಮ್ಮ ತಾಲ್ಲೂಕಿನ ರೈತರಿಗೆ ತುಂಬಾ ನಿರಾಸೆಯಾಗಿದೆ. ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ಕೊಡುವ ಸರ್ಕಾರದ ಧೋರಣೆ ಈಡೇರುವಂತಾಗಿದೆ ಕಾರಣ ಹಿಂದುಳಿದ ಕೊಪ್ಪಳ ತಾಲ್ಲೂಕಿನ ಹಿತದೃಷ್ಟಿಯಿಂದ ಶೀಘ್ರವೇ ಹಣಕಾಸು ಒದಗಿಸಬೇಕಾಗಿ ವಿನಂತಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು).—ಮಾನ್ಯ ಉಪಾಧ್ಯಕ್ಷೆಯವರೆ, ಹೀರೆಹಳ್ಳ ಮಧ್ಯಮ ನೀರಾವರಿ ಯೋಜನೆ, ಕೊಪ್ಪಳ ತಾಲ್ಲೂಕಿನ ಕಿನ್ನಾಳ ಗ್ರಾಮದ ಬಳಿ ಹೀರೆಹಳ್ಳದ ಮತ್ತು ವೀರಾಪುರ ಅಡ್ಡಲಾಗಿ ಆಣೆಕಟ್ಟನ್ನು ನಿರ್ಮಿಸಿ ಎರಡು ದಂಡೆಗಳ ನಾಲೆಗಳ ಮೂಲಕ ಕೊಪ್ಪಳ ತಾಲ್ಲೂಕಿನ ೮೫೫೦ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವ ಉದ್ದೇಶವಿದೆ. ಈ ಯೋಜನೆಯ ಮೂಲ ಅಂದಾಜು ೭೫-೭೬ನೇ ದರಪಟ್ಟಿಯ ಆಧಾರದ ಮೇಲೆ ೬೫೫ ಲಕ್ಷ ರೂಪಾಯಿಗಳಾಗಿದ್ದು, ಆಡಳಿತಾತ್ಮಕ ಮಂಜೂರಾತಿ ೧೯೭೯ನೇ ಮೇ ತಿಂಗಳಲ್ಲಿ ನೀಡಲಾಗಿದೆ. ಯೋಜನೆಯ ಕೆಲಸಗಳು ಪೂರ್ವಭಾವಿಯ ಹಂತದಲ್ಲಿ ಇದ್ದು ಕೆಲವು ಒಡ್ಡಿನ ಹೆಲವು ಭಾಗದಲ್ಲಿ ಕಿಟ್ಟ್ರಜ್ ಕೆಲಸಗಳು ಪ್ರಗತಿಯಲ್ಲಿದೆ. ಈ ಯೋಜನೆಯ ಕೆಲಸಗಳು ೧೯೭೭ನೇ ಸಾಲಿನಲ್ಲಿ ಪ್ರಾರಂಭವಾಗಿದ್ದರೂ ೧೯೯೦ನೇ ಮಾರ್ಚಿ ಅಂತ್ಯದವರೆಗೆ ಒಟ್ಟು ೨೬೮ ಲಕ್ಷ ರೂಪಾಯಿಗಳಷ್ಟು ವ್ಯಯ ಮಾಡಲಾಗಿದೆ. ಈ ಯೋಜನೆ ಪರಿಷ್ಕೃತ ಅಂದಾಜು ೧೯೮೮-೮೯ನೇ ದರಪಟ್ಟಿಯ ಆಧಾರದ ಮೇಲೆ ಸುಮಾರು ೪೦ ಕೋಟಿ ರೂಪಾಯಿಗಳಾಗುವುದೆಂದು ಅಂದಾಜಿಸಲಾಗಿದೆ. ರಾಜ್ಯದ ಹಣ ಸಂಪನ್ಮೂಲವನ್ನನುಸರಿಸಿ ನೀರಾವರಿ ವಿಭಾಗಕ್ಕೆ ಒದಗಿಸಲಾದ ಒಟ್ಟು ಮೊತ್ತದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಅತ್ಯಗತ್ಯವಾಗಿ ಆದ್ಯತೆ ನೀಡಬೇಕಾಗಿದ್ದು ಹಾಗೂ ಮುಂಗಡ ಹಂತದಲ್ಲಿರುವ ಯೋಜನೆಗಳಿಗೆ ಆದ್ಯತೆ ನೀಡಬೇಕಾದ ಅಂಶ ಪರಿಗಣಿಸಿ, ಈ ಯೋಜನೆಗೆ ಅನುದಾನ ಅಗತ್ಯವಿರುವಷ್ಟು ನೀಡಲು ಸಾಧ್ಯವಾಗಿರುವುದಿಲ್ಲ. ಕೇವಲ ಟೋಕನ್ ಅನುದಾನ ನೀಡಿದಲ್ಲಿ ಸಿಬ್ಬಂದಿ ವರ್ಗಕ್ಕೆ ವ್ಯಯವಾಗುವುದೇ ಹೊರತು ಯೋಜನಾ ಕಾಮಗಾರಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಹಣ ಒದಗಿಸಲು ಸಾಧ್ಯವಿರುವುದಿಲ್ಲ. ಈ ಕಾರಣಗಳಿಂದಾಗಿ ಪೂರ್ವ ಬಾವಿ ಹಂತದಲ್ಲಿರುವ ಈ ಯೋಜನೆಗೆ ಆದ್ಯತೆ ನೀಡಲಾಗಿರುವುದಿಲ್ಲ. ಆರ್ಥಿಕ ಸಂಪನ್ಮೂಲದಲ್ಲಿ ಹೆಚ್ಚಳ ಕಂಡು ಬಂದಾಗ ಈ ಯೋಜನೆಯ ಕೆಲಸಗಳನ್ನು ಕೈಗೊಳ್ಳಲಾಗುವುದು.

೭. ಹಾಸನದ ಬಾಲಕರ ಹಾಗೂ ಬಾಲಕಿಯರ ಸರ್ಕಾರಿ ಪ್ರೌಢ ಶಾಲೆಯನ್ನು ಪದವಿ ಪೂರ್ವ ಕಾಲೇಜಿನ್ನಾಗಿ ಪರಿವರ್ತಿಸುವುದು.

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಸಭಾಧ್ಯಕ್ಷೆಯವರೇ, ಹಾಸನದಲ್ಲಿ ಸರ್ಕಾರಿ ಜೂನಿಯರ್ ಕಾಲೇಜುಗಳ ಸಂಖ್ಯೆ ಕಡಿಮೆ ಇದ್ದು, ಪಿ.ಯು.ಸಿ.ಗೆ ಸೇರಲು ಇಚ್ಛಿಸುವ ಎಲ್ಲಾ ವಿದ್ಯಾರ್ಥಿಗಳಿಗೂ ಸ್ಥಳಾವಕಾಶವಿಲ್ಲದೆ ತೊಂದರೆಯಾಗಿದೆ. ಖಾಸಗಿ ಕಾಲೇಜುಗಳಲ್ಲಿ ಪಿ.ಯು.ಸಿ. ತರಗತಿಗಳಿಗೆ ಸೇರಲಿಚ್ಛಿಸುವ ವಿದ್ಯಾರ್ಥಿಗಳಿಂದ ಸಾವಿರಾರು ರೂಪಾಯಿಗಳ ದೇಣಿಗೆಯನ್ನು ವಸೂಲಿ ಮಾಡುತ್ತಿದ್ದು, ಬಡ ವಿದ್ಯಾರ್ಥಿಗಳು ಈ ಖಾಸಗಿ ಪಿ.ಯು.ಸಿ. ಕಾಲೇಜಿಗೆ ಸೇರುವ ಸ್ಥಿತಿಯಲ್ಲಿಲ್ಲ. ಹಾಸನದ ಸರ್ಕಾರಿ ಬಾಲಿಕಾ ಮತ್ತು ಬಾಲಕರ ಪ್ರೌಢ ಶಾಲೆಗಳನ್ನು ಪಿ.ಯು.ಸಿ. ಕಾಲೇಜುಗಳಾಗಿ ಪರಿವರ್ತಿಸಿದರೆ, ವಿದ್ಯಾರ್ಥಿಗಳಿಗೆ ಸ್ಥಳಾವಕಾಶವಾಗಿ, ಖಾಸಗಿ ಕಾಲೇಜುಗಳಿಗೆ ದೇಣಿಗೆ ಕೊಡುವುದನ್ನು ತಪ್ಪಿಸಬಹುದು. ಈ ವಿಚಾರದಲ್ಲಿ ಮಾನ್ಯ ವಿದ್ಯಾಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ (ವಿದ್ಯಾಸಚಿವರು).—ಮಾನ್ಯ ಸಭಾಧ್ಯಕ್ಷೆಯವರೇ, ಹಾಸನದಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜು ಇಲ್ಲದಿರುವುದು ಇಲಾಖೆಯ ಗಮನಕ್ಕೆ ಬಂದಿದ್ದು, ಹಾಸನದ ಬಾಲಕರ ಹಾಗೂ ಬಾಲಕಿಯರ ಸರ್ಕಾರಿ ಪ್ರೌಢ ಶಾಲೆಯನ್ನು ಪದವಿ ಪೂರ್ವ ಕಾಲೇಜನ್ನಾಗಿ ಪರಿವರ್ತಿಸುವ ಬಗ್ಗೆ ಮಾನವಿ ಬಂದಿದ್ದು, ಸದರಿ ಪ್ರೌಢ ಶಾಲೆಯನ್ನು ಪದವಿಪೂರ್ವ ಕಾಲೇಜನ್ನಾಗಿ ಪರಿವರ್ತಿಸುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ, ಖಾಸಗಿ ಕಾಲೇಜುಗಳಲ್ಲಿ ಪಿ.ಯು.ಸಿ. ತರಗತಿಗಳಿಗೆ ಸೇರಲಿಚ್ಛಿಸುವ ವಿದ್ಯಾರ್ಥಿಗಳಿಂದ ಸಾವಿರಾರು ರೂಪಾಯಿಗಳ ದೇಣಿಗೆಯನ್ನು ವಸೂಲಿ ಮಾಡುತ್ತಿರುವ ಬಗ್ಗೆ ಇಲಾಖೆಗೆ ದೂರು ಬಂದಿರುವುದಿಲ್ಲ.